C.R.P.67

Form No.4 (Civil)
Deposition Sheets
(R.P.No.57)

## 6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

## ಎಸ್ ಸಿ ಸಂಖ್ಯೆ: 277/2018

**ಪ್ರಾಸಾ.6 ಚಾಸಾ.11**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಜಗದೀಶ್ |
| **ತಂದೆಯ ಹೆಸರು** | : | ನಾಗರಾಜು |
| **ವಯಸ್ಸು** | : | 32 ವರ್ಷಗಳು |
| **ಉದ್ಯೋಗ** | : | ಕಾರ್ ಚಾಲಕ |
| **ವಾಸ** | : | ಬಾಡೆಕಟ್ಟೆ, ಬೆಂಗಳೂರು. |

## ಪ್ರಮಾಣ ವಚನ ಬೋಧಿಸಿದ ದಿನಾಂಕ: 08.08.2023

## ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ಪ್ರಾಸಾ-1 ಪ್ರಕಾಶ್ ಕುಮಾರ್ ಗೊತ್ತಿಲ್ಲ. ಪ್ರಾಸಾ-5 ಅರುಣ್ ಕುಮಾರ್ ಗೊತ್ತಿಲ್ಲ. ಈಗ ತೋರಿಸಿದ ನಿಶಾನೆ ಪಿ-2 ಸ್ಥಳ ಪಂಚನಾಮೆಯಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಶಾನೆ ಪಿ-2(ಸಿ) ಎಂದು ಗುರುತಿಸಲಾಯಿತು.

3. ಸುಮಾರು 4-5 ವರ್ಷಗಳ ಹಿಂದೆ ನನ್ನ ತಮ್ಮನ ಪಾಸ್ ಪೋರ್ಟ್ ವಿಚಾರದಲ್ಲಿ ಹಾರೋಹಳ್ಳಿ ಪೊಲೀಸ್ ಠಾಣೆಗೆ ಹೋಗಿದ್ದೆ. ಆಗ ಪೊಲೀಸರವರು ಸದರಿ ದಾಖಲೆಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನಿಶಾನೆ ಪಿ-2 ಮಹಜರ್ ದಾಖಲೆಯಲ್ಲಿ ಬರೆದಿರುವ ವಿಚಾರಗಳು ನನಗೆ

ಗೊತ್ತಿಲ್ಲ. ಈ ಕೇಸಿನ ಸಂಬಂಧವಾಗಿ ಪೊಲೀಸರವರು ನನ್ನನ್ನು ವಿಚಾರಿಸಿರುವುದಿಲ್ಲ. ನಾನು ಅವರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು)**

## ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ದಿನಾಂಕ 04.12.2017 ರಂದು ಪೊಲೀಸರವರು ನನ್ನನ್ನು ಮತ್ತು ಫ್ರಾಸಾ-5 ರವರನ್ನು ಉತ್ತರಿ ಗ್ರಾಮದ ಸರ್ವೇ ನಂ. 31 ರಲ್ಲಿನ ಸ್ಮಶಾನದಲ್ಲಿ ನೀರು ಹರಿಯುವ ಹಳ್ಳದ ಬಳಿ ನಮ್ಮನ್ನು ಕರೆಸಿದ್ದರು, ಅಲ್ಲಿ ಫ್ರಾಸಾ-1 ರವರು ಹಾಜರಿದ್ದು, ಮೃತದ ದೇಹವನ್ನು ತೋರಿಸಿದ್ದು, ಆಗ ಪೊಲೀಸರವರು ಪರಿಶೀಲಿಸಿದಾಗ ಮೃತ ದೇಹವು ದಕ್ಷಿಣ ದಿಕ್ಕಿಗೆ ತಲೆಯಾಗಿ, ಉತ್ತರಕ್ಕೆ ಕಾಲುಗಳಿದ್ದು, ಮಕಾಡೆಯಾಗಿತ್ತು, ಸದರಿ ಮೃತದೇಹ 30 ರಿಂದ 35 ವಯಸ್ಸಿನ ವ್ಯಕ್ತಿಯದಾಗಿದ್ದು, ತಲೆಯ ಬಲ ಭಾಗದಲ್ಲಿ ಹರಿತವಾದ ಆಯುಧದಿಂದ ಹೊಡೆದ ಕತ್ತರಿಸಿದ್ದ ರಕ್ತಗಾಯವಾಗಿದ್ದು ಮತ್ತು ಸುಟ್ಟಿತ್ತು ಎಂದರೆ ಸರಿಯಲ್ಲ. ನಂತರ ಪೊಲೀಸರವರು ಮೃತ ದೇಹದ ಮೇಲಿದ್ದ ವಸ್ತುಗಳನ್ನು ಪರಿಶೀಲಿಸಿದಾಗ, ಪಿ.ಎಫ್.ನಂ.154/2017 ರ ಕ್ರಮ ಸಂಖ್ಯೆ 3 ರಿಂದ 19 ರವರೆಗೆ ನಮೂದಿಸಿರುವ ವಸ್ತುಗಳು ಸಿಕ್ಕಿದ್ದು, ಆಗ ಪೊಲೀಸರವರು ಸದರಿ ವಸ್ತುಗಳನ್ನು ಮತ್ತು ಸ್ಥಳದಲ್ಲಿದ್ದ ರಕ್ತ ಮಿಶ್ರಿತ ಮಣ್ಣು ಮತ್ತು

ಸಾಧಾ ಮಣ್ಣನ್ನು ಒಂದು ಪ್ಲಾಸ್ಟಿಕ್ ಡಬ್ಬದಲ್ಲಿ ಶೇಖರಿಸಿ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಮಹಜರ್ ಕ್ರಮ ವನ್ನು ಸಂಜೆ 5.00 ರಿಂದ 6.00 ಗಂಟೆಯವರೆಗೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.

2. ನನಗೆ ಈಗ ಓದಿ ಹೇಳಿದ ರೀತಿ ಅಂದರೆ (ದಿನಾಂಕ 04.12.2017 ರಂದು -------------ಕೋರುತ್ತೇನೆ) ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ.9 ಎಂದು ಗುರುತಿಸಲಾಯಿತು. ನನಗೆ ಈ ಪ್ರಕರಣದ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಮತ್ತು ನಿಶಾನೆ ಪಿ-2 ಮಹಜರ್ ದಾಖಲೆಗೆ ಸ್ಥಳದಲ್ಲಿ ಸಹಿ ಮಾಡಿದ್ದರು ಸಹ ಮತ್ತು ನಿಶಾನೆ ಪಿ-9 ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರು ಸಹ, ನಾನು ಈ ದಿವಸ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಆರ್ .ಕೆ. ವಕೀಲರಿಂದ 1 ಮತ್ತು 2 ನೇ ಆರೋಪಿತರ ಪರವಾಗಿಃ**

ಆರೋಪಿತರ ಪರ ವಕೀಲರು ತಮ್ಮದು ಪಾಟೀ-ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇಲ್ಲ**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.